ಪ್ರಾರ್ಥನೆ

# ಜಗದ್ಗುರು ಶ್ರೀರಾಮಕೃಷ್ಣಸ್ತೋತ್ರ – ೧

ಲೋಕನಾಥಶ್ಚಿದಾಕಾರೋ ರಾಜಮಾನಃ ಸ್ವಧಾಮನಿ ।
ಕಲಿಕಲ್ಮಷಮಗ್ನಾನಾಮುತ್ತಾರಣ-ಚಿಕೀರ್ಷಯಾ ॥
ಮಾಯಾಶಕ್ತಿಂ ಸಮಾಶ್ರಿತ್ಯ ಯೋಽವತೀರ್ಣೋ ಮಹೀತಲೇ ।
ನಮೋಽಸ್ತು ರಾಮಕೃಷ್ಣಾಯ ತಸ್ಮೈ ಶ್ರೀಗುರವೇ ನಮಃ ॥ ೧ ॥



ಸಕಲ ಲೋಕಗಳಿಗೆ ಒಡೆಯನೂ, ಜ್ಞಾನ ಸ್ವರೂಪಿಯೂ ಆದ, ತನ್ನ ದಿವ್ಯ ಧಾಮದಲ್ಲಿ ಪ್ರಕಾಶದಿಂದ ಬೆಳಗುತ್ತಿರುವ, ಕಲಿಯ ಕಲ್ಮಶವಾದ ಕಾಮಕ್ರೋಧಾದಿಗಳಲ್ಲಿ ಮಗ್ನರಾಗಿರುವ ಜನರನ್ನು ಉದ್ಧರಿಸುವ ಇಚ್ಛೆಯಿಂದ ಮಾಯಾಶಕ್ತಿಯನ್ನು ಆಶ್ರಯಿಸಿ ಈ ಭೂಮಂಡಲದಲ್ಲಿ ಅವತಾರ ಮಾಡಿರುವ ಶ್ರೀಗುರು ಶ್ರೀರಾಮಕೃಷ್ಣರಿಗೆ ನಮಸ್ಕಾರ.

ಸದ್ಬ್ರಾಹ್ಮಣಕುಲೇ ಜಾತೋ ದಿವ್ಯದೇಹಂ ಸಮಾಶ್ರಿತಃ ।
ಬಾಲ್ಯೇ ಯೋ ದಿವ್ಯಭಾವೇನ ವಯಸ್ಯೈಃ ಸಹ ಮೋದಯನ್ ॥
ವಿರಕ್ತೋ ಯೌವನೇ ತೀವ್ರಂ ಮಾಯಾಪಾಶ-ವಿವರ್ಜಿತಃ ।
ನಿತ್ಯಮುಕ್ತ-ಸ್ವಭಾವೋಽಪಿ ಲೋಕಾನುಗ್ರಹಕಾಮತಃ ॥ ೨ ॥

ಬಾಲ್ಯದಲ್ಲಿಯೇ ಸ್ನೇಹಿತರೊಡನೆ ಆಡುತ್ತಾ ಆನಂದದಲ್ಲಿ ತನ್ಮಯನಾಗಿದ್ದ, ಯೌವನದಲ್ಲಿ ತೀವ್ರ ವೈರಾಗ್ಯವನ್ನು ಹೊಂದಿದ, ಮಾಯಾಪಾಶವನ್ನು ಕಳಚಿಕೊಂಡ, ನಿತ್ಯ-ಮುಕ್ತ-ಸ್ವಭಾವದವರಾದರೂ ಲೋಕವನ್ನು ಅನುಗ್ರಹಿಸುವ ಬಯಕೆಯಿಂದ ದಿವ್ಯ ದೇಹವನ್ನು ಆಶ್ರಯಿಸಿ, ಉತ್ತಮವಾದ ಬ್ರಾಹ್ಮಣ ಕುಲದಲ್ಲಿ ಜನಿಸಿದ — ಸದ್ಗುರು ಶ್ರೀರಾಮಕೃಷ್ಣರಿಗೆ ನಮಸ್ಕಾರ.

ಲೋಕಾನಾಮೇವ ಶಿಕ್ಷಾರ್ಥಂ ತಪಸ್ತಪ್ತ್ವಾ ಸುದುಸ್ತರಮ್ ।
ನಿದ್ರಾಶನಂ ಪರಿತ್ಯಜ್ಯ ವರ್ಷಾಣಾಂ ದ್ವ್ಯಧಿಕಾನ್ ದಶ ॥
ಸ್ವಸ್ವರೂಪಂ ಸಮಾಧಾಯ ಸಚ್ಚಿದಾನಂದ-ವಿಗ್ರಹಮ್ ।
ದಯಾಮೂರ್ತಿಃ ಸದಾನಂದೋ ಜಿಜ್ಞಾಸೂನುಪದಿಷ್ಟವಾನ್ ॥
ತೇಷಾಮಜ್ಞಾನನಾಶಾಯ ಲಾಭಾಯ ಚ ಪರಾತ್ಮನಃ ।
ನಮೋಽಸ್ತು ರಾಮಕೃಷ್ಣಾಯ ತಸ್ಮೈ ಶ್ರೀಗುರವೇ ನಮಃ ॥ ೩ ॥

ಹನ್ನೆರಡು ವರ್ಷಗಳಿಗೂ ಹೆಚ್ಚು ಕಾಲ ನಿದ್ದೆ, ಊಟಗಳನ್ನು ಬಿಟ್ಟು, ಜೀವಿಗಳಿಗೆ ಶಿಕ್ಷಣ ನೀಡಲು ಅತ್ಯಂತ ಕಠಿಣವಾದ ತಪಸ್ಸನ್ನು ಆಚರಿಸಿದ, ತನ್ನ ನಿಜವಾದ ಸ್ವರೂಪವಾದ ಸಚ್ಚಿದಾನಂದ ವಿಗ್ರಹವನ್ನು ಹೊಂದಿದ್ದರೂ ಅಪಾರ ಕರುಣೆಯನ್ನು ಹೊಂದಿ, ಪರತತ್ತ್ವವನ್ನು ತಿಳಿದುಕೊಳ್ಳುವ ಬಯಕೆಯುಳ್ಳವರಿಗೆ ಅವರ ಅಜ್ಞಾನವನ್ನು ನಾಶ ಮಾಡಿ ತತ್ತ್ವೋಪದೇಶವನ್ನು ಮಾಡಿದ, ಸದಾನಂದ ಸ್ವರೂಪಿಯಾದ ಪರಮಗುರು ಶ್ರೀರಾಮಕೃಷ್ಣರಿಗೆ ನಮಸ್ಕಾರ.

— ಸ್ವಾಮಿ ಅಭೇದಾನಂದ

ಸೂಕ್ತಿಪ್ರಭ

## ಒಳ್ಳೆಯತನ

**ಎ**ಲ್ಲಿ ಸರಳತೆ, ಒಳ್ಳೆಯತನ, ಸತ್ಯಗಳಿಲ್ಲವೋ, ಅಲ್ಲಿ ಶ್ರೇಷ್ಠತೆಯಿರಲಾರದು.

— ಲಿಯೋ ಟಾಲ್‌ಸ್ಟಾಯ್

**ಮುಂ**ಗೋಪಿಯನ್ನು ಕೋಪಗೊಳ್ಳದೆ ಇರುವ ಮೂಲಕ ಗೆಲ್ಲು. ಕೆಟ್ಟವನನ್ನು ಒಳ್ಳೆಯತನದಿಂದ ಗೆಲ್ಲು. ಜಿಪುಣನನ್ನು ಉದಾರತನದಿಂದ ಗೆಲ್ಲು. ಸುಳ್ಳುಗಾರನನ್ನು ಸತ್ಯದಿಂದ ಗೆಲ್ಲು.

— ಗೌತಮ ಬುದ್ಧ

**ಒ**ಳ್ಳೆಯವನು ಹೇಗಿರಬೇಕೆಂದು ಚರ್ಚೆ ಮಾಡುತ್ತಲೇ ಇರಬೇಡ; ಒಳ್ಳೆಯವನಾಗಿರು, ಸಾಕು.

— ಮಾರ್ಕಸ್ ಒರೆಲಿಯಸ್

**ಹೂ**ವಿನ ಸುಗಂಧವು ಗಾಳಿ ಬೀಸಿದ ದಿಕ್ಕಿನಲ್ಲಿ ಮಾತ್ರ ಹರಡುವುದು. ಆದರೆ ಒಬ್ಬ ವ್ಯಕ್ತಿಯ ಒಳ್ಳೆಯತನ ಎಲ್ಲೆಡೆ ಹರಡುವುದು.

— ಚಾಣಕ್ಯ

**ಎಂ**ದಿಗೂ ವಿಫಲವಾಗದ ಬಂಡವಾಳವೆಂದರೆ ಒಳ್ಳೆಯತನವೊಂದೇ.

— ಡೇವಿಡ್ ಹೆನ್ರಿ ಥೋರೋ

**ತಾ**ಳ್ಮೆಗೆ ಸಮಾನವಾದ ತಪಸ್ಸಿಲ್ಲ. ತೃಪ್ತಿಗಿಂತ ಹೆಚ್ಚಿನ ಸುಖವಿಲ್ಲ. ಆಸೆಗೆ ಸಮಾನವಾದ ರೋಗವಿಲ್ಲ. ದಯೆಗಿಂತ ಹೆಚ್ಚಿನ ಧರ್ಮವಿಲ್ಲ.

— ಸುಭಾಷಿತ

**ನಾ**ವು ಸ್ವತಃ ಪರಿಶುದ್ಧರಾಗಿರುವುದು, ಇತರರಿಗೆ ಒಳ್ಳೆಯದನ್ನು ಮಾಡುವುದು — ಇದೇ ಎಲ್ಲ ಪೂಜೆಯ ಸಾರ. ಯಾರು ದೀನರಲ್ಲಿ, ದುರ್ಬಲರಲ್ಲಿ, ರೋಗಿಗಳಲ್ಲಿ ಶಿವನನ್ನು ನೋಡುವರೋ ಅವರೇ ನಿಜವಾಗಿ ಶಿವನನ್ನು ಪೂಜಿಸುವವರು. ಒಬ್ಬನು ಕೇವಲ ವಿಗ್ರಹದಲ್ಲಿ ಮಾತ್ರ ಶಿವನನ್ನು ನೋಡಿದರೆ ಅವನ ಪೂಜೆ ಬರಿಯ ಗೌಣ.

— ಸ್ವಾಮಿ ವಿವೇಕಾನಂದ